

ಮಿಜೋರಾಂ
ಕಣಿವೆಗಳ ನಡುವೆ
ನಿರ್ಮಾಣಗೊಂಡಿರುವ
ರೈಲು ಮಾರ್ಗದ ಸೇತುವೆ

ಈಶಾನ್ಯ ಭಾರತದ ಮಿಜೋರಾಂ ರಾಜ್ಯದ ಜನರು ತಮ್ಮ ಭಾಗ್ಯದ ಬಾಗಿಲು ತೆರೆಯುವ ಕಾಲ ಬಂದಿದೆ ಎಂದು ಖುಷಿಯಾಗಿದ್ದಾರೆ. ಕಡಿದಾದ ಗುಡ್ಡಗಳ ನಡುವೆ ಅರಳಿದ ನಗರ ಐಜ್ವಾಲ್‌ಗೆ ರೈಲು ಸಂಪರ್ಕಿಸುತ್ತಿದೆ. ಮಿಜೋರಾಂನ ಮೊದಲ ರೈಲು ಈ ನಿರೀಕ್ಷೆ ಹುಟ್ಟಿಸಿದೆ.

ಮಿಜೋರಾಂ ಎಂಬ ಕಣಿವೆ ರಾಜ್ಯ ಶೇ 84.5ರಷ್ಟು ಅರಣ್ಯ ಪ್ರದೇಶ ಹೊಂದಿದೆ. ಹಾಗಾಗಿ ಗ್ರಾಮೀಣ ಜನರು ನಗರಕ್ಕೆ ಹೊಂದಿಕೊಂಡೇ ಹೆಚ್ಚಿದ್ದಾರೆ. ಒಟ್ಟು ಜನಸಂಖ್ಯೆಯ ಅರ್ಧದಷ್ಟು ಜನರು ಐಜ್ವಾಲ್ ನಗರದಲ್ಲಿಯೇ ವಾಸವಾಗಿದ್ದಾರೆ. ಪರಿಶ್ರಮಿಗಳೂ ಶಾಂತಸ್ವಭಾವದವರೂ ಆಗಿರುವ ಈ ಜನರಲ್ಲಿ ಬಹುತೇಕರು ಬಡ ಮಧ್ಯಮ ವರ್ಗದವರು. ಶೇ 20ಕ್ಕಿಂತ ಅಧಿಕ ಮಂದಿ ಬಡತನ ರೇಖೆಗಿಂತ ಕೆಳಗಿದ್ದಾರೆ. ಹೊಸ ರೈಲು ಬದಲಾವಣೆಯ ಗಾಳಿ ಬೀಸುವಂತೆ ಮಾಡಿದೆ. ಜನರಲ್ಲಿ ಕನಸುಗಳನ್ನು ಬಿತ್ತಿದೆ.

ಅಸ್ಸಾಂನಿಂದ ಬೈರಾಬಿವರೆಗೆ 2016ರಲ್ಲಿ ಬ್ರಾಡ್‌ಗೇಜ್ ರೈಲು ಮಾರ್ಗ ನಿರ್ಮಾಣವಾಗಿತ್ತು. ಅದರಲ್ಲಿ ಸರಕು ರೈಲುಗಳಷ್ಟೇ ಸಂಚರಿಸುತ್ತಿದ್ದವು. ಬೈರಾಬಿಯಿಂದ ಐಜ್ವಾಲ್ ಬಳಿಯ ಸೈರಾಂಗ್ ಮಧ್ಯದ 51 ಕಿ.ಮೀ. ರೈಲು ಮಾರ್ಗ ನಿರ್ಮಾಣಕ್ಕೆ 2014ರಲ್ಲಿ ಶಂಕುಸ್ಥಾಪನೆ ಮಾಡಲಾಗಿತ್ತು. 2025ರಲ್ಲಿ ಕಾಮಗಾರಿ ಪೂರ್ಣಗೊಂಡಿದೆ. ಸೆ.13ರಂದು ರೈಲು ಸಂಚಾರಕ್ಕೆ ಪ್ರಧಾನಿ ನರೇಂದ್ರ ಮೋದಿಯವರೇ ಚಾಲನೆ ನೀಡಿದ್ದಾರೆ. ಇದರಲ್ಲಿ ಸರಕು (ಗೂಡ್ಸ್) ರೈಲು ಮಾತ್ರವಲ್ಲ, ಪ್ರಯಾಣಿಕರ ಸಂಚಾರ ಆರಂಭವಾಗಿದ್ದು, ಜನರು ರೈಲಲ್ಲಿ ಸಂಚರಿಸಿ ಖುಷಿಪಡುತ್ತಿದ್ದಾರೆ.

ಮಿಜೋರಾಂನ ಸಂಪರ್ಕ ವ್ಯವಸ್ಥೆಯನ್ನು ನೋಡಿದರೆ ಮಿಜೋ ಜನರ ನಿರೀಕ್ಷೆಯ ಮಹತ್ವ ಅರಿವಾಗುತ್ತದೆ. ಮಿಜೋರಾಂನ ರಾಷ್ಟ್ರೀಯ ಹೆದ್ದಾರಿಗಳಲ್ಲಷ್ಟೇ ಏಕಕಾಲದಲ್ಲಿ ಎರಡೂ ಬದಿಗಳಿಂದ ವಾಹನಗಳು ಸರಾಗವಾಗಿ ಸಾಗುವಷ್ಟು ದೊಡ್ಡದಿವೆ. ಚತುಷ್ಪಥ, ಷಟ್ಪಥ, ಅಷ್ಟಪಥಗಳ ಕಲ್ಪನೆ ಇನ್ನೂ ಬಂದಿಲ್ಲ. ರಾಜ್ಯ ರಸ್ತೆ, ಜಿಲ್ಲಾ ರಸ್ತೆಗಳೆಲ್ಲ ಒಂದು ವಾಹನ ಸಾಗುವಷ್ಟು ದೊಡ್ಡದಿವೆ. ಎದುರಿನಿಂದ ಇನ್ನೊಂದು ವಾಹನ ಬಂದಾಗ ಇರುವ ಜಾಗದಲ್ಲಿಯೇ ಒಂದು ವಾಹನ ಬದಿಗೆ ಸರಿದು ನಿಂತು, ಇನ್ನೊಂದು ವಾಹನಕ್ಕೆ ಜಾಗ ಮಾಡಿಕೊಡುತ್ತಾರೆ. ಮಿಜೋರಾಂ ಆರ್ಥಿಕವಾಗಿ ಹಿಂದುಳಿಯಲು ಸಂಪರ್ಕದ ಕೊರತೆಯೇ ಕಾರಣ ಎಂದು ಜನರು ನಂಬಿದ್ದಾರೆ. ಎಲ್ಲದಕ್ಕೂ ಅಸ್ಸಾಂ ಅನ್ನು ಅವಲಂಬಿಸಬೇಕು. ಹೊಸ ರೈಲು ಅಸ್ಸಾಂ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲಿದೆ. ದೇಶದ ಯಾವುದೇ ಮೂಲೆಯನ್ನು ಸಂಪರ್ಕಿಸಲು ಸುಲಭವಾಗಲಿದೆ ಎಂಬ ಕಾರಣಕ್ಕೆ ಜನರು ಈ ನಿರೀಕ್ಷೆ ಇಟ್ಟುಕೊಂಡಿದ್ದಾರೆ.

## ಧರ್ಮಗಳು

ಮಿಜೋರಾಂನಲ್ಲಿ ಶೇ 87ರಷ್ಟು ಜನರು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರು. ಅದರಲ್ಲಿಯೂ ಪ್ರೊಟೆಸ್ಟಂಟ್ ಪಂಗಡಗಳಾದ ಪ್ರೆಸ್ಬಿಟೇರಿಯನ್ ಮತ್ತು ಬ್ಯಾಪ್ಟಿಸ್ಟ್‌ಗಳೇ ಹೆಚ್ಚು. ಕಡಿಮೆ ಪ್ರಮಾಣದಲ್ಲಿ ಕೆಥೋಲಿಕ್‌ಗಳಿದ್ದಾರೆ. ಶೇ 8.5ರಷ್ಟು ಇರುವ ಬೌದ್ಧ ಧರ್ಮ ಎರಡನೇ ಸ್ಥಾನದಲ್ಲಿದೆ. ದಕ್ಷಿಣ ಮಿಜೋರಾಂನ ಚಕ್ಮಾ ಬುಡಕಟ್ಟುಗಳು ಬೌದ್ಧ ಧರ್ಮವನ್ನು ಅನುಸರಿಸುತ್ತಿವೆ. ಶೇ 2.75ರಷ್ಟು ಹಿಂದೂ, ಶೇ 1.35ರಷ್ಟು ಮುಸ್ಲಿಮ್ ಜನಸಂಖ್ಯೆಯನ್ನು ಮಿಜೋರಾಂ ಹೊಂದಿದೆ.




ಸೈರಾಂಗ್ ರೈಲು ನಿಲ್ದಾಣ